ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1238 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಬಿ.ಪಿ.ಎಲ್, ಎ.ಪಿ.ಎಲ್ ಮತ್ತು ಅಂತ್ಯೋದಯ ಯೋಜನೆಯಲ್ಲಿನ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; (ವರ್ಗವಾರು ವಿವರ ನೀಡುವುದು) | ರಾಜ್ಯದಲ್ಲಿ 10,93,751 ಅಂತ್ಯೋದಯ (ಎಎವೈ) ಪಡಿತರ ಚೀಟಿಗಳು 1,16,08,196 ಆದ್ಯತಾ (ಪಿಹೆಚ್ ಹೆಚ್) ಪಡಿತರ ಚೀಟಿಗಳು ಹಾಗೂ 20,39,437 ಆದ್ಯತೇತರ ಪಡಿತರ (ಎನ್ ಪಿಹೆಚ್ ಹೆಚ್) ಚೀಟಿಗಳು ಹೀಗೆ ಒಟ್ಟು 1,47,41,384 ಪಡಿತರ ಚೀಟಿಗಳಿವೆ. ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ. |
| ಆ | ಸದರಿ ಯೋಜನೆಗಳ ಮಾನದಂಡಗಳೇನು; | ಸರ್ಕಾರಿ ಆದೇಶ ಸಂಖ್ಯೆ: ಆನಾಸ 116 ಡಿಆರ್ ಎ 2015, ಬೆಂಗಳೂರು, ದಿನಾಂಕ: 25/03/2017 ಮತ್ತು 20/05/2017 ರಂತೆ ಈ ಕೆಳಕಂಡ ಹೊರಗಿಡುವ ಮಾನದಂಡಗಳನ್ನು ಆಧರಿಸಿ ಆದ್ಯತಾ ಪಡಿತರ ಚೀಟಿ ಪಡೆಯಬಹುದು.<br>1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ: ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷ ಹಾಗೂ ಹೆಚ್ಚಿಗೆ ಇರುವ ಕುಟುಂಬಗಳು.<br>ಮೇಲ್ಕಂಡ ಮಾನದಂಡಗಳಿಗೆ ಒಳಪಡುವವರು ಆದ್ಯತೇತರ (ಎನ್ ಪಿಹೆಚ್ ಹೆಚ್ ) ಪಡೆಯಲು ಅರ್ಹರಿರುತ್ತಾರೆ. |

| | | |
|---|---|---|
| ಇ | ಸದರಿ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೆ ಮಾಸಿಕ ನೀಡುತ್ತಿರುವ ಆಹಾರ ಧಾನ್ಯಗಳ ಪ್ರಮಾಣವೆಷ್ಟು; (ವರ್ಗವಾರು ವಿವರ ನೀಡುವುದು) | ಪ್ರತಿ ಅಂತ್ಯೋದಯ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ ಉಚಿತವಾಗಿ, ಆದ್ಯತಾ ಪಡಿತರ ಚೀಟಿ (ಪಿಹೆಚ್ ಹೆಚ್) ಯ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ.<br>ಆದ್ಯತೇತರ (ಎನ್ ಪಿಹೆಚ್ ಹೆಚ್) ಪಡಿತರ ಚೀಟಿದಾರರು ಪಡಿತರಕ್ಕಾಗಿ ಒಪ್ಪಿಗೆ ನೀಡಿರುವವರು ಪ್ರತಿ ಮಾಹೆ ಪ್ರತಿ ಕೆ.ಜಿ.ಗೆ ರೂ.15/-ರಂತೆ ಪಡಿತರ ಚೀಟಿಯಲ್ಲಿನ ಏಕ ಸದಸ್ಯರಿಗೆ 5 ಕೆ.ಜಿ ಅಕ್ಕಿ ಹಾಗೂ ಎರಡಕ್ಕಿಂತ ಹೆಚ್ಚು ಸದಸ್ಯರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ. |
| ಈ | ಕಳಪೆ ಆಹಾರ ಧಾನ್ಯಗಳನ್ನು ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಉ | ಕಳಪೆ ಆಹಾರ ಧಾನ್ಯಗಳ ಪೂರೈಕೆ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು; ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಅನ್ವಯಿಸುವುದಿಲ್ಲ. |
| ಊ | ಮೇಲ್ಕಂಡ ಯೋಜನೆಗಳಲ್ಲಿ ನಕಲಿ ಪಡಿತರ ಚೀಟಿಗಳನ್ನು ಪಡೆದಿರುವವರು ಇದ್ದಾರೆಯೇ; | ಅನರ್ಹರು ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಋ | ಹಾಗಾದರೆ, ಅವರುಗಳ ಸಂಖ್ಯೆ ಎಷ್ಟು ಹಾಗೂ ಅವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರಾಜ್ಯದಲ್ಲಿ ಕಳೆದ ಎಂಟು ತಿಂಗಳಿನಿಂದ ಒಟ್ಟು 63,922 ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿ ಅವರಿಂದ ರೂ.96,27,960/- ದಂಡವನ್ನು ಸಂಗ್ರಹಿಸಿ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ.<br>ಅನರ್ಹರು ಪಡಿತರ ಚೀಟಿಗಳನ್ನು ಸ್ವ ಇಚ್ಛೆಯಿಂದ ಸಂಬಂಧಪಟ್ಟ ತಾಲ್ಲೂಕು/ವಲಯ ಕಛೇರಿಗಳಿಗೆ ಸಂಪರ್ಕಿಸಿ ಏಪ್ರಿಲ್-2020 ರೊಳಗೆ ಅದ್ಯಾರ್ಪಣೆಯನ್ನು ಮಾಡುವಂತೆ ಕಾಲಾವಕಾಶವನ್ನು ನಿಗಧಿಪಡಿಸಲಾಗಿದೆ. ಈ ಅವಧಿ ಮುಗಿದ ನಂತರವೂ ಇಂತಹ ಅನರ್ಹರು ಆದ್ಯಾರ್ಪಣೆ ಮಾಡದಿದ್ದಲ್ಲಿ ಇಲಾಖಾವತಿಯಿಂದ ಅನರ್ಹ ಪಡಿತರ ಚೀಟಿ ಹೊಂದಿರುವವರ ವಿರುದ್ಧ ದಂಡ ವಿಧಿಸಲಾಗುವುದು. ಅವಶ್ಯಕ ವಸ್ತುಗಳ ಕಾಯ್ದೆ 1955 ರಡಿ ಹೊರಡಿಸಲಾದ The prevention of unauthorised possession of ration card order 1977 ರನ್ವಯ ಪ್ರಕರಣ ದಾಖಲಿಸಲಾಗುವುದೆಂದು ಸ್ಥಳೀಯ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿರುತ್ತದೆ. |

ಆನಾಸ 104 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

LCQ: 1238

| Annexure | | | | | |
|---|---|---|---|---|---|
| District wise Ration card details | | | | | |
| Districts | AAY RCs | PHH RCs | Total RCs | NPHH RCs | Total RCs |
| BAGALKOTE | 46448 | 365488 | 411936 | 54761 | 466697 |
| BENGALURU * | 12943 | 495539 | 508482 | 70307 | 578789 |
| BANGALORE EAST * | 2468 | 68479 | 70947 | 81666 | 152613 |
| BANGALORE NORTH * | 2593 | 106788 | 109381 | 58786 | 168167 |
| BANGALORE SOUTH * | 5670 | 107009 | 112679 | 66247 | 178926 |
| BANGALORE WEST * | 4545 | 180804 | 185349 | 93785 | 279134 |
| BENGALURU RURAL | 14411 | 216803 | 231214 | 15181 | 246395 |
| BELAGAVI | 68908 | 1061635 | 1130543 | 292216 | 1422759 |
| BALLARI | 66660 | 528240 | 594900 | 56059 | 650959 |
| BIDAR | 39819 | 305391 | 345210 | 42372 | 387582 |
| VIJAYAPURA | 42445 | 467426 | 509871 | 65969 | 575840 |
| CHAMARAJANAGARA | 35759 | 255586 | 291345 | 10772 | 302117 |
| CHIKKAMAGALURU | 22638 | 244983 | 267621 | 53308 | 320929 |
| CHITRADURGA | 42535 | 363048 | 405583 | 25628 | 431211 |
| CHIKKABALLAPURA | 28627 | 280911 | 309538 | 11171 | 320709 |
| DAKSHINA KANNADA | 23182 | 249199 | 272381 | 160231 | 432612 |
| DAVANAGERE | 45589 | 334384 | 379973 | 31079 | 411052 |
| DHARWAR | 29726 | 349943 | 379669 | 77921 | 457590 |
| GADAG | 28375 | 225026 | 253401 | 31623 | 285024 |
| KALABURAGI | 63455 | 481061 | 544516 | 90882 | 635398 |
| HASSAN | 23432 | 429467 | 452899 | 31183 | 484082 |
| HAVERI | 47219 | 341784 | 389003 | 47436 | 436439 |
| KODAGU | 10115 | 99822 | 109937 | 27563 | 137500 |
| KOLAR | 29936 | 314617 | 344553 | 25494 | 370047 |
| KOPPAL | 37532 | 291110 | 328642 | 13423 | 342065 |
| MANDYA | 34599 | 450751 | 485350 | 46321 | 531671 |
| MYSURU | 50514 | 656215 | 706729 | 89951 | 796680 |
| RAICHUR | 53067 | 404299 | 457366 | 29782 | 487148 |
| RAMANAGARA | 19019 | 280523 | 299542 | 8866 | 308408 |
| SHIVAMOGGA | 37956 | 354191 | 392147 | 89035 | 481182 |
| TUMAKURU | 49499 | 613116 | 662615 | 49167 | 711782 |
| UDUPI | 28670 | 162016 | 190686 | 100236 | 290922 |
| UTTARA KANNADA | 16176 | 291828 | 308004 | 81870 | 389874 |
| YADGIR | 29221 | 230714 | 259935 | 9146 | 269081 |
| TOTAL | 1093751 | 11608196 | 12701947 | 2039437 | 14741384 |